ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು - ೧೫

ಪಟ್ಟಿ-೨

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ಮೂರನೇ ಅಧಿವೇಶನ

ಮಂಗಳವಾರ, ದಿನಾಂಕ: ೧೬ನೇ ಜುಲೈ, ೨೦೨೪

---

### ಸಮೂಹ - II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಹಾಗೂ ಹಜ್ ಸಚಿವರು

೬. ಸಹಕಾರ ಸಚಿವರು

೭. ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

---

## ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಭಾರತ್ ಗ್ಯಾಸ್ ಲಿಮಿಟೆಡ್‌ದಿಂದ ಗ್ಯಾಸ್ ಪೈಪ್‌ಲೈನ್ ಅನುಷ್ಠಾನ ಕುರಿತು

ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) -

೧೬ (೨೧೬) ಪೌರಾಡಳಿತ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

(ಅ) ಗದಗ–ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಭಾರತ್ ಗ್ಯಾಸ್ ಲಿಮಿಟೆಡ್‌ನಿಂದ ಗ್ಯಾಸ್ ಪೈಪ್‌ಲೈನ್ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಗರಸಭೆಯ ಹಾಗೂ ಭಾರತ್ ಗ್ಯಾಸ್ ಲಿಮಿಟೆಡ್ ಇವರ ಪಾತ್ರವೇನು ;

(ಆ) ಈಗಾಗಲೇ ಗ್ಯಾಸ್ ಪೈಪ್‌ಲೈನ್ ಅನುಷ್ಠಾನಗೊಳ್ಳುತ್ತಿದಲ್ಲಿ, ರಸ್ತೆ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ದೂರುಗಳು ಸ್ವೀಕೃತವಾಗಿವೆಯೇ ;

(ಇ) ರಸ್ತೆ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ, ನಗರ ಸಭೆಯಿಂದ ಮೇಲ್ವಿಚಾರಣೆ ರೂಪದಲ್ಲಿ ಯಾವ ಕ್ರಮ ವಹಿಸಲಾಗುತ್ತಿದೆ ; (ಕಾಮಗಾರಿ ಅನುಷ್ಠಾನದ ವಿವರದೊಂದಿಗೆ ಮಾಹಿತಿ ನೀಡುವುದು)

(ಈ) ರಸ್ತೆ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಅನುಷ್ಠಾನದ ಕಾಮಗಾರಿವಾರು ಅಂದಾಜು ಪಟ್ಟಿಯಂತೆ ನಗರಸಭೆ ಮತ್ತು ಭಾರತ್ ಗ್ಯಾಸ್ ಇವರಿಂದ ದೃಢೀಕೃತ ನೀಲಿ ನಕ್ಷೆಯ ಪರವಾನಗಿ ಇದೆಯೇ ? (ಛಾಯಾ ಚಿತ್ರದ ಪ್ರತಿಯನ್ನು ಒದಗಿಸುವುದು)

## ಸಾಲ ಮನ್ನಾ ಯೋಜನೆಯಡಿ ಬಾಕಿ ಉಳಿದಿರುವ ಅನುದಾನದ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೭ (೧೭೦) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೧೭ನೇ ಸಾಲಿನ ರೂ. ೫೦೦೦೦/– ಗಳ ಸಾಲ ಮನ್ನಾ ಯೋಜನೆ ಮತ್ತು ೨೦೧೮ನೇ ಸಾಲಿನ ರೂ. ೧೦೦೦೦೦/–ಗಳ ಸಾಲ ಮನ್ನಾ ಯೋಜನೆಯಡಿ ರಾಮನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ಬಿಡುಗಡೆಯಾಗದೆ ಬಾಕಿ ಉಳಿದಿರುವ

ಸುಮಾರು ರೂ.೧೦೭೫ ಲಕ್ಷಗಳ ಅನುದಾನವನ್ನು ಇಲ್ಲಿಯವರೆಗೆ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಬಾಕಿ ಉಳಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) ಬಾಕಿ ಉಳಿದಿರುವ ಅನುದಾನದ ಬಿಡುಗಡೆಗಾಗಿ ೫–೬ ವರ್ಷಗಳಿಂದ ಕಾಯುತ್ತಿರುವ ಸುಮಾರು ೨೩೧೦ ಅರ್ಹ ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೀಡಾಗಿರುವುದು ಮತ್ತು ಇವರ ಸಾಲ ಮನ್ನಾ ಆಗದಿರುವುದರಿಂದ ಇವರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಲು ಬ್ಯಾಂಕ್‌ಗಳಿಗೆ ಕಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಂತಹ ರೈತರಿಗೆ ಹೊಸ ಸಾಲ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಹಾಲು ಉತ್ಪಾದಕರ ಸಂಘಗಳ ಬಗ್ಗೆ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೧೮ (೧೯೯) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿರುವ ಒಟ್ಟು ಹಾಲು ಉತ್ಪಾದಕರ ಸಂಘಗಳು ಎಷ್ಟು ; ಪ್ರತಿ ದಿನ ರೈತರಿಂದ ಸಂಗ್ರಹವಾಗುವ ಹಾಲಿನ ಪ್ರಮಾಣ ಎಷ್ಟು ; ಮಾರಾಟವಾಗುವ ಹಾಲಿನ ಪ್ರಮಾಣ ಎಷ್ಟು ;

(ಆ) ಸದರಿ ಜಿಲ್ಲೆಗಳಲ್ಲಿರುವ ಹಾಲು ಉತ್ಪಾದಕರ ಸಂಘಗಳು ಲಾಭದಾಯಕದಲ್ಲಿದೆಯೇ ; ಅಥವಾ ನಷ್ಟದಲ್ಲಿವೆಯೇ ; (ಅಂಕಿ ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

(ಇ) ರೈತರಿಗೆ ಸರಿಯಾದ ಸಮಯಕ್ಕೆ ಪ್ರೋತ್ಸಾಹಧನ ಸಂದಾಯವಾಗುತ್ತಿದೆಯೇ ; ಪ್ರತಿ ತಿಂಗಳು ಯಾವ ದಿನಾಂಕದಂದು ಹಣ ಸಂದಾಯ ಮಾಡಲಾಗುತ್ತಿದೆ ; ಸರಿಯಾದ ಸಮಯಕ್ಕೆ ಪ್ರೋತ್ಸಾಹಧನ ಸಂದಾಯವಾಗದಿರುವ ಕುರಿತು ದೂರುಗಳು ಬಂದಿವೆಯೇ ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ;

(ಈ) ಸದರಿ ಜಿಲ್ಲೆಗಳಲ್ಲಿನ ರೈತರಿಗೆ ಜೂನ್–೨೦೨೪ರ ಅಂತ್ಯದವರೆಗೆ ಒಟ್ಟು ಪಾವತಿ ಮಾಡಲು ಬಾಕಿ ಉಳಿದಿರುವ ಪ್ರೋತ್ಸಾಹಧನದ ಮೊತ್ತವೆಷ್ಟು ; ಮತ್ತು ರೈತರ ಸಂಖ್ಯೆಗಳೆಷ್ಟು ; ಯಾವ ಕಾರಣಕ್ಕಾಗಿ ಪ್ರೋತ್ಸಾಹಧನವನ್ನು ಬಾಕಿ ಉಳಿಸಿಕೊಳ್ಳಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಸಹಕಾರಿ ಸಂಘಗಳು ಮತ್ತು ಸಾಲ ಮನ್ನಾ ಮಾಡುವ ಬಗ್ಗೆ

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೯ (೧೯೪) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯಾದ್ಯಂತ ಇರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸೇವಾ ಸಂಘಗಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಆ) ಕರ್ನಾಟಕ ರಾಜ್ಯದಲ್ಲಿನ ಸಹಕಾರಿ ಸಾಲದ ಮೊತ್ತ ಎಷ್ಟು ; ಸಾಲ ತೆಗೆದುಕೊಂಡ ರೈತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಇ) ಕಳೆದ ೧೦ ವರ್ಷಗಳಲ್ಲಿ ಮುಖ್ಯಮಂತ್ರಿಯವರ ಸಾಲಮನ್ನಾ ಯೋಜನೆಯಲ್ಲಿ ಎಷ್ಟು ರೈತರ ಸಾಲ ಮನ್ನಾ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ಈ ಯೋಜನೆಯಡಿಯಲ್ಲಿ ಎಷ್ಟು ರೈತ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ; ಈ ಯೋಜನೆಯ ಒಟ್ಟು ಫಲಾನುಭವಿಗಳೆಷ್ಟು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಉ) ಈ ಯೋಜನೆಯಡಿ ಸಾಲಮನ್ನಾ ಮಾಡಲಾದ ಎಷ್ಟು ಫಲಾನುಭವಿ ರೈತರ ಖಾತೆಗೆ ಈವರೆಗೆ ಹಣ ಜಮೆಯಾಗಿದೆ ; ಜಮೆಯಾಗಿರುವ ಫಲಾನುಭವಿ ರೈತರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

## ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸದಸ್ಯರಿಗೆ ಗೌರವಧನದ ಹೆಚ್ಚಳದ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೦ (೨೬೩) ಪೌರಾಡಳಿತ ಹಾಗೂ ಹಜ್‌ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು ; ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿನ ಸದಸ್ಯರ ಸಂಖ್ಯೆಗಳೆಷ್ಟು ; (ವಿವರ ಒದಗಿಸುವುದು)

(ಆ) ಈ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸದಸ್ಯರಿಗೆ ಇರುವಂತಹ ಸೌಲಭ್ಯಗಳೇನು ;

(ಇ) ಈ ಸದಸ್ಯರುಗಳಿಗೆ ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಹೆಚ್ಚಳ ಮಾಡಲು ಸರ್ಕಾರ ಯೋಚಿಸಿದೆಯೇ ;

(ಈ) ಈ ಸದಸ್ಯರುಗಳಿಗೆ ಗೌರವಧನ ಹೆಚ್ಚಿಸಲು ಮತ್ತು ಆರೋಗ್ಯ ಸೌಲಭ್ಯವನ್ನು ವಿಸ್ತರಿಸುವ ಕುರಿತು ಸರ್ಕಾರದ ನಿಲುವೇನು ?

## ತುಮಕೂರು ಹಾಗೂ ಚಿತ್ರದುರ್ಗ ಮಧ್ಯೆ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೧ (೨೦೨) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ತುಮಕೂರು ಹಾಗೂ ಚಿತ್ರದುರ್ಗ ಮಧ್ಯೆ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಯೋಜನೆ ಇದೆಯೇ ; (ವಿವರ ಒದಗಿಸುವುದು)

(ಆ) ಹಿರಿಯೂರು ಚಿತ್ರದುರ್ಗ ನಡುವೆ ಪ್ರಸ್ತಾವನೆ ಇಂಡಸ್ಟ್ರಿಯಲ್ ಏರಿಯ ಕೆ.ಐ.ಎ.ಡಿ.ಬಿ. ಭೂ ಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಇ) ಯಾವ ಅವಧಿಯ ಒಳಗೆ ರೈತರಿಂದ ಭೂ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಕೈಗಾರಿಕೆಗಳಿಗೆ ಹಂಚಿಕೆ ಮಾಡಲಾಗುವುದು ? (ವಿವರ ಒದಗಿಸುವುದು)

## ರಾಜ್ಯದ ನೇಕಾರರ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೨೨ (೨೩೩) ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು ; (ಜಿಲ್ಲಾವಾರು/ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ರಾಜ್ಯದ ನೇಕಾರರಿಗೆ ಕಾರ್ಮಿಕರ ಕಾರ್ಡ್ ವಿತರಿಸುವ ರೀತಿಯಲ್ಲಿ ನೇಕಾರರ ಕಾರ್ಡ್ ವಿತರಿಸುವ ಬಗ್ಗೆ ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)

(ಇ) ನೇಕಾರರಿಗೆ ಸರ್ಕಾರದಿಂದ ಉಚಿತ ವಿದ್ಯುತ್ ಒದಗಿಸುವ ಬಗ್ಗೆ ಸರ್ಕಾರದ ನಿಲುವೇನು ; ನಿವೇಶನ ರಹಿತ ನೇಕಾರರಿಗೆ ನಿವೇಶನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; (ವಿವರ ನೀಡುವುದು)

(ಈ) ರಾಜ್ಯದ ನೇಕಾರರಿಗೆ ಕಚ್ಚಾ ವಸ್ತುಗಳನ್ನು ಸರ್ಕಾರದಿಂದಲೇ ಪೂರೈಸುವ ಬಗ್ಗೆ ಹಾಗೂ ನೇಕಾರರಿಂದ ನೇರವಾಗಿ ಸೀರೆ/ಯುನಿಫಾರಂ ಸೇರಿದಂತೆ ಇತರೆ ವಸ್ತುಗಳನ್ನು ಖರೀದಿ ಮಾಡುವ ಬಗ್ಗೆ ಸರ್ಕಾರದ ನಿಲುವೇನು ; (ಮಾಹಿತಿ ನೀಡುವುದು)

(ಉ) ನೇಕಾರರ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಹಕಾರ ಸಂಘ–ಸಂಸ್ಥೆಗಳಲ್ಲಿ ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; (ವಿವರ ನೀಡುವುದು)

(ಊ) ನೇಕಾರರ ಕುಟುಂಬದ ಮಕ್ಕಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರವು ಉಚಿತ ಉನ್ನತ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಋ) ನೇಕಾರರ ಮಕ್ಕಳಿಗೆ ಹಿಂದುಳಿದ ವರ್ಗಗಳ ವಸತಿ ಶಾಲೆಗಳಲ್ಲಿ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಇದೆಯೇ ; ಇಲ್ಲದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪ್ರತ್ಯೇಕ ಮೀಸಲಾತಿ ವ್ಯವಸ್ಥೆ ಕಲ್ಪಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)

## ಸಹಕಾರ ಸಂಘಗಳಿಂದ ರೈತರಿಗೆ ಸಾಲ ನೀಡುವ ಬಗ್ಗೆ

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೩ (೨೩.೨) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ೨೦೨೩–೨೪ನೇ ಸಾಲಿನಲ್ಲಿ ಸಹಕಾರ ಸಂಘ/ಬ್ಯಾಂಕ್‌ಗಳಿಂದ ಈ ಹಿಂದೆ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ನೀಡಲಾಗಿರುವ ಸಾಲದ ಮೊತ್ತ ಎಷ್ಟು ;

(ಆ) ರಾಜ್ಯದಲ್ಲಿ ಸಹಕಾರ ಸಂಘ/ಬ್ಯಾಂಕ್‌ಗಳಿಂದ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ೨೦೨೪–೨೫ನೇ ಸಾಲಿಗೆ ನೀಡಲು ಉದ್ದೇಶಿಸಿರುವ ಸಾಲದ ಮೊತ್ತ ಎಷ್ಟು ;

(ಇ) ಪ್ರಸ್ತುತ ಈವರೆಗೆ ಎಷ್ಟು ಸಾಲ ವಿತರಣೆ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಪ್ರತಿ ಜಿಲ್ಲೆಗೆ ಅಂದಾಜು ಎಷ್ಟು ಮೊತ್ತದ ಸಾಲವನ್ನು ಎಷ್ಟು ರೈತರುಗಳಿಗೆ ನೀಡಲು ಉದ್ದೇಶಿಸಲಾಗಿದೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಉ) ಕೃಷಿ ಸಾಲ ಗುರಿಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಯಾವ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ?

## ಆನೇಕಲ್ ತಾಲ್ಲೂಕಿನಲ್ಲಿ KIADB ವತಿಯಿಂದ ವಶಪಡಿಸಿಕೊಂಡಿರುವ ಭೂಮಿಯ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪ (೨೬೧) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ಸುತ್ತ ಮುತ್ತ KIADB ವತಿಯಿಂದ ಎಷ್ಟು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ ; (ವಿವರ ನೀಡುವುದು)

(ಆ) ಆನೇಕಲ್ ತಾಲ್ಲೂಕಿನಲ್ಲಿ KIADB ವತಿಯಿಂದ ಯಾವ ಯಾವ ಉದ್ದೇಶಕ್ಕೆ ಈ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಭೂಮಿಯನ್ನು ಯಾರಿಗೂ ಹಂಚಿಕೆ ಮಾಡದಿದ್ದಲ್ಲಿ ಇಷ್ಟು ವರ್ಷಗಳ ಕಾಲ ಯಾವ ಉಪಯೋಗಕ್ಕೂ ಅದನ್ನು ಬಳಕೆ ಮಾಡದೇ ಮತ್ತು ರೈತರಿಗೆ ನೀಡದೆ ಇಟ್ಟುಕೊಳ್ಳಲು ಕಾರಣವೇನು;

(ಈ) ವಶಪಡಿಸಿಕೊಂಡಿರುವ ಭೂಮಿಯನ್ನು ಉಪಯೋಗ ಮಾಡಿಕೊಂಡಿಲ್ಲದ ಕಾರಣ ಅದನ್ನು ರೈತರಿಗೆ ವಾಪಸ್ ನೀಡಲು ಸರ್ಕಾರ ಮುಂದಾಗುವುದೇ ? (ವಿವರ ನೀಡುವುದು)

## ಬೆಂಗಳೂರು–ಹುಬ್ಬಳ್ಳಿ–ಧಾರವಾಡ ವಂದೆ ಭಾರತ್ ಎಕ್ಸ್‌ಪ್ರೆಸ್ ಸೇವೆಯನ್ನು ಬೆಳಗಾವಿಯವರೆಗೆ ವಿಸ್ತರಿಸುವ ಕುರಿತು

**ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ ) –**

೨೫ (೧೪೯) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನಿಂದ ಹುಬ್ಬಳ್ಳಿ–ಧಾರವಾಡಕ್ಕೆ ಹಾಗೂ ಧಾರವಾಡ–ಹುಬ್ಬಳ್ಳಿಯಿಂದ ಬೆಂಗಳೂರಿಗೆ ಹೋಗುವ–ಬರುವ ವಂದೆ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸೇವೆಯನ್ನು ಬೆಳಗಾವಿಯವರೆಗೆ ವಿಸ್ತರಿಸಲಾಗಿದೆಯೇ ; ಇಲ್ಲದಿದ್ದಲ್ಲಿ ಕಾರಣವೇನು ;

(ಆ) ಬೆಂಗಳೂರಿನಿಂದ ಹುಬ್ಬಳ್ಳಿ–ಧಾರವಾಡಕ್ಕೆ ಹೊರಡುವ ವಂದೆ ಭಾರತ್ ಎಕ್ಸ್‌ಪ್ರೆಸ್ ಸೇವೆಯನ್ನು ಬೆಳಗಾವಿಯವರೆಗೆ ವಿಸ್ತರಿಸುವ ಸಂಬಂಧ ಕೇಂದ್ರ ರೈಲ್ವೆ ಮಂಡಳಿಯು ಆದೇಶ ಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಲ್ಲಿಯವರೆಗೆ ಸದರಿ ಸೇವೆಯನ್ನು ಬೆಳಗಾವಿಯವರೆಗೆ ವಿಸ್ತರಿಸದಿರಲು ಕಾರಣವೇನು ;

(ಇ) ಈ ರೈಲಿನ ಸೇವೆಯನ್ನು ಬೆಳಗಾವಿಯವರೆಗೆ ವಿಸ್ತರಿಸುವ ಸಂಬಂಧ ಸರ್ಕಾರವು ಕೈಗೊಂಡಿರುವ ಕ್ರಮಗಳಾವುವು ? (ಸಂಪೂರ್ಣ ವಿವರ ನೀಡುವುದು)

## ಲ್ಯಾಂಪ್ಸ್ ಸಹಕಾರಿ ಸಂಘಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** –

೨೬ (೧೬೪) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿರುವ ಲ್ಯಾಂಪ್ಸ್ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಲ್ಯಾಂಪ್ಸ್ ಸಹಕಾರಿ ಸಂಘಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಲಬುರಗಿಯ ಕೈಗಾರಿಕಾ ನಿವೇಶನಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)** –

೨೭ (೧೮೯) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ನಗರದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸ್ಥಾಪಿಸಲು ಎಷ್ಟು ಎಕರೆ ಭೂಮಿಯನ್ನು ಎಲ್ಲೆಲ್ಲಿ ಕಾಯ್ದಿರಿಸಲಾಗಿದೆ ; ಇದರಲ್ಲಿ ಒಟ್ಟು ಎಷ್ಟು ಕೈಗಾರಿಕೆ ಶೆಡ್ ನಿರ್ಮಿಸಲಾಗಿದೆ ; ಎಷ್ಟು ಹಂಚಿಕೆ ಮಾಡಲಾಗಿದೆ ; (ವಿವರ ಒದಗಿಸುವುದು) ಎಷ್ಟು ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ ; ಎಷ್ಟು ಸ್ವಾಧೀನಪಡಿಸಿಕೊಳ್ಳುವ ಹಂತದಲ್ಲಿದೆ ; (ವಿವರ ಒದಗಿಸುವುದು)

(ಆ) ಹಂಚಿಕೆ ಮಾಡಲಾದ ನಿವೇಶನ/ಕೈಗಾರಿಕಾ ಶೆಡ್‌ಗಳ ಸಂಖ್ಯೆ ಎಷ್ಟು ; ಯಾವ ಯಾವ ಕಂಪನಿಗೆ ಹಂಚಿಕೆ ಮಾಡಲಾಗಿದೆ ; (ವಿವರವಾದ ಮಾಹಿತಿ ಒದಗಿಸುವುದು)

(ಇ) ಈ ಶೆಡ್/ನಿವೇಶನ ಮಂಜೂರು ಮಾಡಲು ಇರುವ ಮಾನದಂಡಗಳೇನು ; ಮಂಜೂರು ಮಾಡಿರುವ ಸೈಟ್/ನಿವೇಶನಗಳು ಆಯಾ ಉದ್ದೇಶಕ್ಕಾಗಿ ಕಾರ್ಯನಿರ್ವಹಿಸುತ್ತಿವೆಯೇ? (ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸೇರಿರುವ ೧೧ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) –**

೨೮ (೨೫೭) ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಲಬುರಗಿ ಸ್ಥಳೀಯ ಯೋಜನೆ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಹೆಚ್ಚುವರಿಯಾಗಿ ೧೧ ಗ್ರಾಮಗಳನ್ನು ಸೇರಿಸಿ ದಿನಾಂಕ: ೧೫.೦೨.೨೦೧೬ರಲ್ಲಿ ಸೇರಿಸಿ ವಿಸ್ತರಿಸಿದ್ದು,

ಈ ಗ್ರಾಮಗಳ ಅಭಿವೃದ್ಧಿ ಕಾರ್ಯಗಳನ್ನು ಸ್ಥಗಿತಗೊಳಿಸಿ ಈ ಪ್ರದೇಶಕ್ಕೆ ಮಹಾ ಯೋಜನೆಯನ್ನು ಸಿದ್ಧಪಡಿಸುವಂತೆ ಆದೇಶಿಸಿದ್ದರೂ ಇಲ್ಲಿಯವರೆಗೂ ಸಿದ್ಧಪಡಿಸದೇ ಇರಲು ಕಾರಣವೇನು ;

(ಆ) ಈ ೧೧ ಗ್ರಾಮಗಳ ಮಹಾ ಯೋಜನೆಯ ವಿಳಂಬದಿಂದಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಈ ಮಹಾ ಯೋಜನೆಯ ಅಭಿವೃದ್ಧಿ ಯೋಜನೆಯ ವಿಳಂಬದಿಂದಾಗಿ ಸರ್ಕಾರಕ್ಕೆ ಆಗುತ್ತಿರುವ ನಷ್ಟವೆಷ್ಟು ;

(ಈ) ಯಾವ ಕಾಲಮಿತಿಯಲ್ಲಿ ಸದರಿ ಗ್ರಾಮಗಳಿಗೆ ಮಹಾ ಯೋಜನೆಯನ್ನು ಸಿದ್ಧಪಡಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ? (ವಿವರ ನೀಡುವುದು)

## ಕೈಗಾರಿಕಾ ನಿವೇಶನಗಳು ಮಂಜೂರಾಗಿದ್ದರೂ ಸಹ ಇದುವರೆಗೂ ಕೈಗಾರಿಕೆಗಳು ಪ್ರಾರಂಭಗೊಳ್ಳದೇ ಇರುವ ಕುರಿತು

**ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೨೯ (೧೬೩) ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ೫ ವರ್ಷದ ಅವಧಿಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಸಣ್ಣ ಕೈಗಾರಿಕಾ ವಲಯಗಳನ್ನು ಪ್ರಾರಂಭಿಸಲಾಗಿದೆ ;

(ಆ) ಈ ಕೈಗಾರಿಕೆಗಳನ್ನು ಸ್ಥಾಪಿಸಲು ಕೆ.ಎಸ್.ಎಸ್.ಐ.ಡಿ.ಸಿ. ಮೂಲಕ ಮಂಜೂರು ಮಾಡಲಾಗಿರುವ ನಿವೇಶನಗಳೆಷ್ಟು ; ಇದರಲ್ಲಿ ಎಷ್ಟು ಕೈಗಾರಿಕೆಗಳು ಪ್ರಾರಂಭಗೊಂಡಿದೆ ; ಎಷ್ಟು ಜನರಿಗೆ ಉದ್ಯೋಗ ದೊರಕಿದೆ ; (ಪೂರ್ಣ ವಿವರ ನೀಡುವುದು)

(ಇ) ಬಹಳಷ್ಟು ಫಲಾನುಭವಿಗಳು ನಿವೇಶನ ಹಂಚಿಕೆಯಾಗಿ ೧೦ ವರ್ಷಗಳು ಕಳೆದರೂ, ಇದುವರೆಗೂ ಯಾವುದೇ ಕೈಗಾರಿಕೆಗಳನ್ನು ಪ್ರಾರಂಭಿಸಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ನಿವೇಶನಗಳನ್ನು ಹಂಚಿಕೆ ಮಾಡುವ ಸಂದರ್ಭದಲ್ಲಿ ಸರ್ಕಾರವು ಅನುಸರಿಸುತ್ತಿರುವ ನೀತಿ ನಿಯಮಗಳೇನು ; ನಿರ್ದಿಷ್ಟ ಕಾಲಮಿತಿಯೊಳಗೆ ಕೈಗಾರಿಕೆಗಳನ್ನು ಪ್ರಾರಂಭಿಸದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; ಮತ್ತು ಇದುವರೆಗೂ ಎಷ್ಟು ನಿವೇಶನಗಳನ್ನು ನಿಗಮದ ವ್ಯಾಪ್ತಿಗೆ ವಾಪಸ್ಸು ಪಡೆಯಲಾಗಿದೆ ?

(ಉ) ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೊಸದಾಗಿ ಕೈಗಾರಿಕಾ ವಲಯವನ್ನು ಸ್ಥಾಪಿಸಲು ಯಾವುದಾದರೂ ಸ್ಥಳವನ್ನು ಗುರುತಿಸಲಾಗಿದೆಯೇ ? (ಪೂರ್ಣ ವಿವರ ಒದಗಿಸುವುದು)

## ರಾಜ್ಯದಲ್ಲಿ ಹೊಸದಾಗಿ ಬೃಹತ್ ಕೈಗಾರಿಕೆ ಸ್ಥಾಪಿಸುವ ಬಗ್ಗೆ

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) –**

೩೦ (೨೨೭) ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಬೃಹತ್ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ತೀರ್ಮಾನಿಸಲಾಗಿದೆ ; (ವಿವರ ನೀಡುವುದು)

(ಆ) ಉದ್ದೇಶಿತ ಕಾರ್ಖಾನೆಗಳು ಸಕಾಲದಲ್ಲಿ ಪ್ರಾರಂಭವಾದರೆ ರಾಜ್ಯದಲ್ಲಿ ಯುವ ಜನತೆಗೆ ಎಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ ;

(ಇ) ಹೊಸ ಕಾರ್ಖಾನೆಗಳನ್ನು ಯಾವ ಕಾಲಮಿತಿಯೊಳಗಾಗಿ ಪ್ರಾರಂಭ ಮಾಡಲಾಗುವುದು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ ೩2

**List of Questions**
**for Oral Answers**

**Total No. of**
**Questions - 15**

# LIST - 02

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Tuesday, the 16th July, 2024

**GROUP - II**

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Co-operation
7. Minister for Urban Development and Town Planning

### INSTALLATION OF GAS PIPELINE

**Sri S.V. Sankanur (Graduates' Constituency) -**

16 (216) Will the Minister for Municipalities and Haj be pleased to state:-

a) the role of city municipal council and Bharat Gas Limited with regard to installation of gas pipeline by the Bharat Gas Limited in the limits of Gadag - Betageri city municipal council;

b) if the gas pipeline is being installed already whether the complaints have been received with regard to re-construction of road;

c) the particular steps being taken by the city municipal council in the form of monitoring with regard to re-construction of road; (information along with details of installation work be furnished)

d) whether there is a license of the blue print that has been approved by the city municipal council and Bharat Gas Limited as per the workwise estimation list of installation with regard to re-construction of road; (photo copy be furnished)

**OUTSTANDING GRANT UNDER LOAN WAIVER SCHEME**

**Sri S. Ravi (Local Authorities Constituency) -**

17 (170) Will the Minister for Co-operation be pleased to state:-

a) whether it has come to the notice of the Government that about Rs.1075 lakhs of outstanding grant has not been released till date with regard to Ramanagara, Bangalore rural and Bangalore urban district under Rs.50,000/- loan waiver scheme during the year 2017 and Rs.1,00,000 loan waiver scheme during the year 2018; if so, the measures taken by the Government to release the outstanding grant; (complete details be furnished)

b) whether it has come to the notice of the Government that approximately 2310 eligible farmer families are in severe financial burden and they are awaiting from 5 to 6 years for releasing of outstanding grant and the banks are faceing hardship to provide new loan facilities to them as their loans are not-waived off; if so, the measures taken by the Government to provide a new loan facility for such farmers? (details be furnished)

**MILK PRODUCERS' CO-OPERATIVE SOCIETIES IN VIJAYAPURA, BAGALKOT AND BELAGAVI DISTRICTS**

**Sri Nirani Hanamant Rudrappa (Graduates' Constituency) -**

18 (199) Will the Minister for Co-operation be pleased to state:-

a) the total number of Milk producers co-operative societies in Vijayapura, Bagalkot and Belagavi districts; the quantum of milk that has been collected from farmers every day; the quantum of milk that is being sold;

b) whether the milk producers co-operative societies are in profitable condition or in losses in the said districts; (complete information along with statistics be furnished)

c) whether the incentives are being paid to farmers in time; the date on which the amount is being paid every month; whether complaints have been received with regard to the incentives not being paid on time; if so, the steps taken by the Government in this regard;

d) the total outstanding amount of incentive that have to be paid for farmers in the said districts till the end of june-2024 and the number of farmers for the same; the reasons for which the incentive have remained un paid? (complete information be furnished)

## LOAN WAIVE OFF IN CO-OPERATIVE SOCIETIES OF THE STATE

**Sri Sunil Vallyapur (Elected by Legislative Assembly) -**

19 (194) Will the Minister for Co-operation be pleased to state:-

a) the number of primary agricultural credit co-operative societies across the State; (details be furnished)

b) the amount of loan of co-operative societies in the Karnataka State; the number of farmer who have borrowed the loan; (district wise complete details be furnished)

c) the number of farmers to whom the loan has been waived off under the Chief Minister's loan waiver scheme during the last 10 years; (district wise details be furnished)

d) the number of beneficiaries of farmers who have been selected under this scheme; the total number of beneficiaries of this scheme; (district wise complete details be furnished)

e) the number of beneficiary farmers account which are credited with the amount for whom the loan is waived off under this scheme so far; the number of beneficiary of farmers to whom the amount has been credited? (districtwise complete details be furnished)

## ENHANCEMENT OF HONORARIUM TO MEMBERS OF CITY MUNICIPAL COUNCIL, TOWN MUNICIAL COUNCIL AND TOWN PANCHAYATS

**Sri Arun D.S (Local Authorities Constituency) -**

20 (263) Will the Minister for Municipalities and Haj be pleased to state:-

a) the number of city municipal councils, town municipal councils, town panchayats in the State; the number of members in city municipal councils, town municipal councils and town panchayats; (details be furnished)

b) the prevailing facilities to members of the same;

c) whether the Government has contemplated to enhance the honorarium which is being provided for these members at present;

d) the stand of the Government with regard to enhancement of honorarium and to extend the health facility for this members?

## CONSTRUCTIONA OF AIRPORT IN TUMAKURU AND CHITRADURGA STRETCH

**Sri Naveen. K.S (Local Authorities Constituency) -**

21 (202) Will the Minister for Large and Medium Scale Industries and Infrastructure Development be pleased to state:-

a) whether the plan is before the Government with regard to construction of airport in Tumakuru and Chitradurga stretch; (details be furnished)

b) the present stage of the land acquisition process by the K.I.A.D.B for proposed industrial area between Hiriyur -Chitradurga;

c) the time limit within which the land would be allocated to industries that has been acquired from farmers? (details be furnished)

## REGARDING WEAVERS OF THE STATE

**Sri Keshava Prasad S. (Elected by Legislative Assembly) -**

22 (233) Will the Minister for Textiles, Sugarcane Development and Sugar and Agricultural Marketing be pleased to state:-

a) the number of weavers in the State; (districtwise/ talukwise information be furnished)

b) the stand of the Government with regard to distribution of the weavers card in the same manner of distributing labour card for weavers of the State; (information be furnished)

c) the stand of the Government with regard to supply free electricity by the Government for weavers; whether the proposal is before the Government to provide the site for site less weavers; (details be furnished)

d) the stand of the Government with regard to supply raw materials by the Government to the weavers of the State and to purchase sarees/uniform including other materials directly from the weavers; (information be furnished)

e) whether the proposal is before the Government to waive off the loan of weavers taken from the nationalized bank and cooperative societies; (details be furnished)

f) whether it has come to the notice of the Government that the children of weavers family are being deprived from higher education; if so, the steps taken with regard to providing free higher education by the Government; (details be furnished)

g) whether there is a separate reservation facility in backward classes residential schools for weavers children; if not, the time limit within which separate reservation facility would be provided?

## LOAN FOR FARMERS FROM CO-OPERATIVE SOCITIES

**Sri Dinesh Gooligowda (Local Authorities Constituency) -**

23 (232) Will the Minister for Co-operation be pleased to state:-

a) the amount of interest free loan that has been provided by the co-operative societies / banks to farmers earlier during 2023-24;

b) the amount of interest free loan that has been intended to provide to farmers by the co-operative societies / banks in the state for the year 2024-25;

c) the amount of loan that has been distributed till date; (districtwise information be furnished)

d) the number of farmers and approximately the amount of loan that has been intended to be provided to each district; (districtwise complete information be furnished)

e) whether the intention is before the Government to enhance the target of agricultural loans; if so, the quantum in which the same would be enhanced?

## LAND AQUIRED BY K.I.A.D.B IN ANEKAL TALUK

**Sri H.S. Gopinath (Local Authorities Constituency) -**

24 (261) Will the Minister for Large and Medium Scale Industries and Infrastructure Development be pleased to state:-

a) the extent of land that has been acquired by K.I.A.D.B in the surroundings of Anekal taluk of Bangalore district; (details be furnished)

b) the purpose for which this land has been acquired by K.I.A.D.B in Anekal taluk; (complete details be furnished)

c) if the said land has not been allocated to any one, the reasons for the land being kept without any utilisation for any purpose and not providing for farmers since several years;

d) whether the Government would come forward to return the land for farmers due to the non- utilization of the same? (details be furnished)

## EXTENSION OF BENGALURU-HUBBALLI VANDE BHARAT EXPRESS SERVICE TILL BELAGAVI

**Sri Prakash Babanna Hukkeri (Teachers' Constituency) -**

25 (149) Will the Minister for Large and Medium Scale Industries and Infrastructure Development be pleased to state:-

a) whether the train service of Vande Bharat express which will depart-arrive from Bengaluru to Hubballi Dharwad and Dharwad - Hubballi to Bengaluru that has been extended till Belagavi; if not, the reason for the same;

b) whether it has come to the notice of the Government that the order has been issued by the central railway board with regard to extending the service of Vande Bharat express which departs from Bengaluru to Hubballi-Dharwad till belagavi; if so, the reasons for not extending the said service till Belagavi so far;

c) the steps taken by the Government with regard to extension of this train service till Belagavi? (complete details be furnished)

## LAMPS (LARGE AREA MULTIPURPOSE SOCIETIES) CO-OPERATIVE SOCIETIES

**Sri Shantharama Budna Siddi (Nominated) -**

26 (164) Will the Minister for Co-operation be pleased to state:-

a) the number of Lamps co-operative societies in the State; (district wise information be furnished)

b) the steps taken by the Government for the development of these Lamps co-operative societies?

## INDUSTRIAL SITES OF KALABURAGI

**Sri Thippanappa Kamaknoor (Elected by Legislative Assembly) -**

27 (189) Will the Minister for Large and Medium Scale Industries and Infrastructure Development be pleased to state:-

a) the places where and the extent of acres of land that has been reserved to establish the large and medium scale industries in the Kalaburagi city; out of which, the total number of industrial shed that has been constructed; the extent of land that has been allocated; (details be furnished) the extent of land that has been acquired; the present stage of land acquisition; (details be furnished)

b) the number of site/industrial sheds that have been allotted; the particulars of the companies for which site/ sheds have been allotted; (detailed information be furnished)

c) the prevailing criteria for sanctioning this shed/site; whether the sanctioned sheds/sites are being utilized for the respective purpose? (complete information be formation)

## DEVELOPMENTAL WORKS OF 11 VILLAGES BELONGING TO KALABURAGI LOCAL PLANNING AREA

**Sri Shashil G.Namoshi (Teachers' Constituency) -**

28 (257) Will the Minister for Urban Development and Town Planning be pleased to state:-

a) Kalaburgi local planning area has been extended by inserting of 11 villages additionally on 15.02.2016 under the Karnataka town and country planning Act eventhough the order has been issued to prepare Maha Yojana for this area by stagnating the developmental at works of this villages, the reasons for not preparing the same till date;

b) whether it has come to the notice of the Government that the developmental works have been stagnated due to delay of Maha Yojana of these 11 villages; if so, the measures taken by the Government in this regard;

c) the amount of the loss that has been occurred to the exchequer of the Government due to delay of developmental works of this Maha Yojana;

d) the time limit within which developmental works would be commenced by preparing Maha Yojana for the said villages? (details be furnished)

## NON COMMNCEMENT OF INDUSTRIES

**Sri Govinda Raju (Elected by Legislative Assembly) -**

29 (163) Will the Minister for Small Scale Industries and Public Enterprises be pleased to state:-

a) the extent of acres of land in which small scale industry zones have been commenced in Kolar and Chikkaballapur district during the last five years;

b) the number of sites that have been sanctioned through K.S.S.I.D.C to establish these industries; out of which, the number of industries that have been commenced; the number of people to whom the employment has been provided; (complete details be furnished)

c) whether it has come to the notice of Government, that no industries have been commenced till date, even though 10 years have been elapsed after allotment of sites to several beneficiaries;

d) if so, the rules and regulations that are being followed by the Government, while allocating the sites; if the industries are not commencing within the prescribed time limit, the steps taken by the government and the number of sites which have been taken back to the corporation limits till date;

e) whether any new place has been identified to establish the industrial zones in Kolar and Chikkaballapur district? (complete details be furnish)

## ESTABLISHMENT OF NEW LARGE SCALE INDUSTRIES IN THE STATE

**Sri Prakash K. Rathod (Nominated) -**

30 (227) Will the Minister for Large and Medium Scale Industries and Infrastructure Development be pleased to state:-

a) the particulars of the commencement of new large scale industries by the the Government in the State during the current year; (details be furnished)

b) if the proposed industries are commenced on time, the number of employment that will be generated to youths in the State;

c) the timelimit within which new factories would be commenced?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- - Copies